# COMPETANT AUTHORITIES

| Sl.No | Date | Type | File No | Subject |
|---|---|---|---|---|
| 1. | 02.01.2001 | Circular | ಡಿಪಿಎಆರ್ 26 ಸೇಇವಿ 2000 | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ-1957ರ ಪ್ರಕಾರ ಸಕ್ಷಮ ಪ್ರಾಧಿಕಾರವು ಅವರವರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವ ಬಗ್ಗೆ. |
| 2. | 07.02.2001 | Official Memorandum | ಡಿಪಿಎಆರ್ 01 ಸೇಇವಿ 2001, | ಚುನಾವಣಾ ಕಾರ್ಯಕ್ರಮಕ್ಕಾಗಿ ನಿಯೋಜಿಸಲ್ಪಟ್ಟ ಸರ್ಕಾರಿ ನೌಕರರ ಮೇಲೆ ಭಾರತ ಚುನಾವಣಾ ಆಯೋಗವು ಹೊಂದಿರುವ ಶಿಸ್ತಿನ ಅಧಿಕಾರ ವ್ಯಾಪ್ತಿಯ ಬಗ್ಗೆ |
| 3. | 11.02.2010 | Notification | DPAR 46 SDE 2008 | ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ) ನಿಯಮಗಳು, 1957ರ ನಿಯಮ 7(1) ರನ್ವಯ ತಹಶಿಲ್ದಾರ್ ಗ್ರೇಡ್-II ಹುದ್ದೆ ಹೊರತು ಪಡಿಸಿ ಎಲ್ಲಾ ಇಲಾಖೆಗಳ/ಸೇವೆಗಳ ಸಮೂಹ-ಬಿ ಹುದ್ದೆಗಳ ಮೊದಲ ನೇಮಕಾತಿಗೆ ಸಂಬಂಧಿಸಿದಂತೆ ಇಲಾಖಾ ಮುಖ್ಯಸ್ಥರನ್ನು ನೇಮಕಾತಿ ಪ್ರಾಧಿಕಾರ ಎಂದು ಗುರುತಿಸುವ ಬಗ್ಗೆ. |
| 4. | 12.10.2011 | Notification | DPAR 47 SDE 2011 | ಸಿಸಿಎ ನಿಯಮಗಳ ನಿಯಮ 7(1) ರನ್ವಯ ಕರ್ನಾಟಕ ಸರ್ಕಾರ ಸಚಿವಾಲಯದ ಗ್ರೂಪ್-ಬಿ ಹುದ್ದೆಗಳ ಅಧಿಕಾರಿಗಳಿಗೆ ನೇಮಕ ಪ್ರಾಧಿಕಾರಿಯನ್ನಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಗುರುತಿಸುವ ಬಗ್ಗೆ |
| 5. | 23.05.2015 | Notification | DPAR 11 SDE 2015 | ಸಿ.ಸಿ.ಎ ನಿಯಮಗಳ ನಿಯಮ 7(1) ರನ್ವಯ ಕರ್ನಾಟಕ ಸರ್ಕಾರ ಸಚಿವಾಲಯದ ಸೇವೆಗಳ ಗ್ರೂಪ್-ಬಿ ಹುದ್ದೆಗಳ ನೇಮಕ ಪ್ರಾಧಿಕಾರಿಯನ್ನಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಗುರುತಿಸುವ ಬಗ್ಗೆ |
| 6. | 28.06.2021 | Official Memorandum | ಸಿಆಸುಇ 19 ಸೇಇವಿ 2021 | ರಾಜ್ಯ ಸರ್ಕಾರವು ಸ್ಥಾಪಿಸಿರುವ ನಿಗಮ, ಮಂಡಳಿ, ಕಂಪನಿ, ಸ್ಥಳೀಯ ಸಂಸ್ಥೆ ವಿಶ್ವವಿದ್ಯಾಲಯ ಇತ್ಯಾದಿ ಸ್ವಾಯತ್ತ ಸಂಸ್ಥೆಗಳು ಅವುಗಳ ನೌಕರರ ನೇಮಕಾರಿ ಮತ್ತು ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನಿಯಮ/ ವಿನಿಯಮಗಳನ್ನು ರಚಿಸುವ ಬಗ್ಗೆ ಸೂಚನೆಗಳು |

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 26 ಸೇಇವಿ 2000

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 2.1.2001

**ಸುತ್ತೋಲೆ**

ವಿಷಯ: ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಪ್ರಕಾರ ಸಕ್ಷಮ ಪ್ರಾಧಿಕಾರಗಳು, ಅವರವರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವ ಬಗ್ಗೆ.

ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 2(ಎ) ರಲ್ಲಿ ನೇಮಕಾತಿ ಪ್ರಾಧಿಕಾರ ("Appointing Authority") ಎನ್ನುವುದನ್ನು ಈ ಕೆಳಗೆ ಉದ್ಧರಿಸಿದಂತೆ ವ್ಯಾಖ್ಯಾನಿಸಲಾಗಿದೆ:-

"2 Interpretation:-

In these rules, Unless the context otherwise requires-

(a) appointing Authority 'in relation to a Government servant means:-

(i) The authority empowered to make appointments to the Service of Which the Government Servant is for the time being a member or to the grade of the Service in which the Government Servant is for the time being included, or

(ii) The authority empowered to make appointments to the post which the Government servant for the time being holds, or

(iii) The authority which appointed the Governmet servant to such service, grade or post, as the case may be, whichever authority is the highest authority,"

2. ಸದರಿ ನಿಯಮಗಳ ನಿಯಮ 9ರ ಉಪ ನಿಯಮ (3)ನ್ನು ಈ ಕೆಳಗೆ ಉದ್ಧರಿಸಿದೆ:-

" 9(3) Notwithstanding anything contained in this rule, no penalty specified in clauses (v) to (viii) of rule 8 shall be imposed by any authority lower than the Appointing Authority."

1. ಸದರಿ ನಿಯಮಗಳ ನಿಯಮ 10ರ ಉಪ ನಿಯಮ (1)ನ್ನು ಈ ಕೆಳಗೆ ಉದ್ಧರಿಸಿದೆ:-

"10(1) The Appointing Authority or any authority to which it is sub-ordinate or any other authority empowered by the Government in this behalf may place a Government servant under suspension-

(a) Where a disciplinary proceeding against him is contemplated or is pending; or

(b) Where a case against him in respect of any criminal offence is under invstingation or trial;

Provided that, where the order of suspension is made by an authority empowered by Government in this behalf which is lower than the appointing authority, such authotity shall forthwith report to the appointing authority the circumstances in which the order was made."

4. ಈ ರೀತಿ ನೇಮಕಾತಿ ಪ್ರಾಧಿಕಾರಕ್ಕಿಂತ, ಉನ್ನತ ಪ್ರಾಧಿಕಾರ (The Authority higher than the Appointing Authority) ದಂಡನೆಯನ್ನು ವಿಧಿಸುವ:ಅಮಾನತ್ತಿನಲ್ಲಿಡುವ ಅಧಿಕಾರವನ್ನು ಹೊಂದಿರುತ್ತದೆ.

5. ಇತ್ತೀಚೆಗೆ ಒಂದು ಪ್ರಕರಣದಲ್ಲಿ ಒಬ್ಬ ಸರ್ಕಾರಿ ನೌಕರನು ಅನಧಿಕೃತವಾಗಿ ಗೈರುಹಾಜರಾದ್ದರಿಂದ, ಇಲಾಖಾ ಮುಖ್ಯಸ್ಥರು ಅವರ ಮೇಲೆ ಶಿಸ್ತು ಕ್ರಮವನ್ನು ಆರಂಭಿಸಿ, ಇಲಾಖಾ ವಿಚಾರಣೆ ಇನ್ನೂ ಬಾಕಿ ಇದ್ದಾಗ, ಕರ್ನಾಟಕ ಸರ್ಕಾರದ ಸಚಿವಾಲಯದ ಮಟ್ಟದಲ್ಲಿ (ಅಂದರೆ, ಸರ್ಕಾರದ ಮಟ್ಟದಲ್ಲಿ) ಆ ಪ್ರಕರಣವನ್ನು ವ್ಯವಹರಿಸಿ, ಆ ನೌಕರರ ಗೈರುಹಾಜರಾದ ಪೂರ್ಣ ಅವಧಿಯನ್ನು ಅವರ ಹಕ್ಕಿನಲ್ಲಿರುವ ರಜೆ ಎಂದು ಪರಿಗಣಿಸುವಂತೆ ಹಾಗೂ ಅವರಿಗೆ ನೇಮಕಾತಿ ನೀಡುವಂತೆ ಆದೇಶಿಸಲಾಗಿದೆ.

6.ಅದೇ ರೀತಿ, ಸಂಬಂಧಿಸಿದ ಇಲಾಖಾ ಮುಖ್ಯಸ್ಥರು, ದುರ್ನಡತೆಯ ಆರೋಪದ ಮೇಲೆ, ಸಂಬಂಧಿಸಿದ ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿಟ್ಟಿದ್ದು, ನಂತರ, ಅವರು, ಆ ನೌಕರನ ವಿರುದ್ಧ ಆರೋಪಣಾ ಪಟ್ಟಿ ತಯಾರಿಸಿ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಿದ ನಂತರ, ಸರ್ಕಾರವು, ಅವನ ಅಮಾನತ್ತಿನ ಆದೇಶ ರದ್ದುಪಡಿಸಿ, ಅವನ ವಿರುದ್ಧ ನಡೆಸಲು ಉದ್ದೇಶಿಸಿದ್ದ ಶಿಸ್ತಿನ ನಡವಳಿಗಳನ್ನು ನಡೆಸಬಾರದೆಂದು ತೀರ್ಮಾನಿಸಿ, ಅವನನ್ನು ಅದೇ ಸ್ಥಳದಲ್ಲಿ ಅದೇ ಹುದ್ದೆಗೆ ಪುನಃ ನೇಮಕ ಮಾಡಿದೆ.

7. ಸದರಿ ನಿಯಮಗಳಡಿ ದಂಡನೆ ವಿಧಿಸುವ ಹಾಗೂ ಅಮಾನತ್ತಿನಲ್ಲಿಡುವ ಅಧಿಕಾರ ಸರ್ಕಾರಕ್ಕೆ (ಅಂದರೆ, ಕರ್ನಾಟಕ ಸರ್ಕಾರದ ಸಚಿವಾಲಯದ ಮಟ್ಟದಲ್ಲಿ) ಇದ್ದರೂ ಸಹ, ಆ ನಿಯಮಗಳಡಿ ಆ ಅಧಿಕಾರವನ್ನು ಹೊಂದಿದ, ಕ್ಷೇತ್ರ ಇಲಾಖೆಗಳ ಸಕ್ಷಮ ಪ್ರಾಧಿಕಾರಗಳೇ ಆ ಅಧಿಕಾರವನ್ನು ಚಲಾಯಿಸಲು ಅವರನ್ನು ಪ್ರೋತ್ಸಾಹಿಸಬೇಕು, ಅಂದರೆ, ಅದನ್ನು ಅವರವರ ವಿವೇಚನೆಗೆ ಬಿಡಬೇಕು ಹಾಗೂ ನಿಯತ ಕ್ರಮದಂತೆ (as a routine) ಅಂತಹ ಪ್ರಕರಣವನ್ನು ಸರ್ಕಾರದ ಮಟ್ಟದಲ್ಲಿ (ಅಂದರೆ, ಕರ್ನಾಟಕ ಸರ್ಕಾರ ಸಚಿವಾಲಯದ ಮಟ್ಟದಲ್ಲಿ) ವ್ಯವಹರಿಸುವುದನ್ನು ಆದಷ್ಟು ತಡೆಗಟ್ಟಬೇಕೆಂದು, ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ: ಕಾರ್ಯದರ್ಶಿಗಳಿಗೆ ಈ ಮೂಲಕ ಸೂಚಿಸಿದೆ.

**ಕೆ. ಎಲ್ ಜಯರಾಮ್**
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
(ಸೇವಾ ನಿಯಮಗಳು)

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ**

**ಅಧಿಕೃತ ಜ್ಞಾಪನ**

**ಸಂಖ್ಯೆ: ಸಿಆಸುಇ:1: ಸೇಇವಿ:2001, ಬೆಂಗಳೂರು, ದಿನಾಂಕ: 7ನೇ ಫೆಬ್ರುವರಿ 2001**

**ವಿಷಯ:** ಚುನಾವಣಾ ಕಾರ್ಯಕ್ಕಾಗಿ ನಿಯೋಜಿಸಲ್ಪಟ್ಟ ಸರ್ಕಾರಿ ನೌಕರರ ಮೇಲೆ ಭಾರತ ಚುನಾವಣಾ ಆಯೋಗವು ಹೊಂದಿರುವ ಶಿಸ್ತಿನ ಅಧಿಕಾರ ವ್ಯಾಪ್ತಿಯ ಬಗ್ಗೆ.

**ಓದಲಾಗಿದೆ:** ಭಾರತ ಸರ್ಕಾರ ಸಿಬ್ಬಂದಿ, ಸಾರ್ವಜನಿಕ ದೂರು ಮತ್ತು ಪಿಂಚಣಿ (ಸಿಬ್ಬಂದಿ ಮತ್ತು ತರಬೇತಿ ಇಲಾಖೆ) ಜಂಟಿ ಕಾರ್ಯದರ್ಶಿ (ಇ) ರವರ ದಿನಾಂಕ: 8.11.2000ದ ಪತ್ರ ಸಂಖ್ಯೆ: 11012: 7:98-ಈ ಎಸ್‌ಟಿಟಿ (ಎ).

*****

**ಪ್ರಸ್ತಾವನೆ:-**

ಭಾರತ ಚುನಾವಣಾ ಆಯೋಗವು ನಡೆಸುವ ವಿವಿಧ ಚುನಾವಣೆಗಳಲ್ಲಿ ಸರ್ಕಾರಿ ನೌಕರರನ್ನು ಚುನಾವಣಾ ಪ್ರಕ್ರಿಯೆಗಾಗಿ ನಿಯೋಜಿಸಲಾಗುತ್ತದೆ. ಈ ರೀತಿ ನಿಯೋಜಿಸಲ್ಪಟ್ಟ ಸರ್ಕಾರಿ ನೌಕರರು ಚುನಾವಣಾ ಆಯೋಗದ ಅಧಿಕಾರ ವ್ಯಾಪ್ತಿಯಲ್ಲಿರುತ್ತಾರೆ.

2. ಹೀಗೆ ಚುನಾವಣಾ ಕರ್ತವ್ಯಕ್ಕಾಗಿ ನಿಯೋಜಿಸಲ್ಪಟ್ಟ ಸರ್ಕಾರಿ ನೌಕರರ ಮೇಲೆ ಭಾರತ ಚುನಾವಣಾ ಆಯೋಗವು ಹೊಂದಿರುವ ಶಿಸ್ತಿನ ಅಧಿಕಾರ ವ್ಯಾಪ್ತಿಯ ಬಗ್ಗೆ ಭಾರತ ಸರ್ಕಾರದ ಸಿಬ್ಬಂದಿ, ಸಾರ್ವಜನಿಕ ದೂರು, ಪಿಂಚಣಿ (ಸಿಬ್ಬಂದಿ ಮತ್ತು ತರಬೇತಿ ಇಲಾಖೆ) ಮಂತ್ರಾಲಯವು ಹೊರಡಿಸಿರುವ ಮೇಲೆ ಉಲ್ಲೇಖದಲ್ಲಿ ನಮೂದಿಸಿರುವ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ. ಅದು ಸ್ವಯಂ ವೇದ್ಯವಾಗಿದೆ.

3. ಭಾರತ ಸರ್ಕಾರದ ಸದರಿ ಸೂಚನೆಗಳನ್ನು ಸಂಬಂಧಪಟ್ಟ ಎಲ್ಲರ ಗಮನಕ್ಕೆ ತರಲು ಸರ್ಕಾರದ ಎಲ್ಲ ಪ್ರಧಾನ ಕಾರ್ಯದರ್ಶಿ: ಸರ್ಕಾರದ ಕಾರ್ಯದರ್ಶಿ: ಇಲಾಖಾ ಮುಖ್ಯಸ್ಥರಿಗೆ ಈ ಮೂಲಕ ಸೂಚಿಸಲಾಗಿದೆ.

ಪಿ.ಆರ್. 223

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ. ಎಲ್ ಜಯರಾಮ್**
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
(ಸೇವಾ ನಿಯಮಗಳು)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 46 ಸೇಇವಿ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 11.2.2010.

**ಅಧಿಸೂಚನೆ**

ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ (7) ರ ಉಪ ನಿಯಮ (1)ರ ಪರಂತುಕದನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ತಹಸೀಲ್ದಾರ್ ಗ್ರೇಡ್-II ಸಮೂಹ 'ಬಿ' ಹುದ್ದೆಗಳನ್ನು ಹೊರತುಪಡಿಸಿ ಎಲ್ಲಾ ಇಲಾಖೆ/ಸೇವೆಗಳಲ್ಲಿರುವ ಸಮೂಹ 'ಬಿ' ಹುದ್ದೆಗಳ ಮೊದಲ ನೇಮಕಾತಿಗಳಿಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ನೇಮಕಾತಿ ಪ್ರಾಧಿಕಾರವೆಂದು ನಿರ್ದಿಷ್ಟಪಡಿಸಲಾಗಿದೆ.

ಪರಂತು, ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರನ್ನು ಸಮೂಹ 'ಬಿ' ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರವೆಂದು ಈಗಾಗಲೇ ಅಧಿಸೂಚಿಸಿರುವುದನ್ನು ಹೊರತುಪಡಿಸಿ ಕರ್ನಾಟಕ ನಾಗರಿಕ ಸೇವೆಗಳು ಸಮೂಹ-ಬಿ ಹುದ್ದೆಗಳಿಗೆ ಸರ್ಕಾರದಿಂದ ನೇಮಕಗೊಂಡವರಿಗೆ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 8 ರ ಕ್ಲಾಸ್ (v) ರಿಂದ (viii) ರಲ್ಲಿ ನಿರ್ದಿಷ್ಟಪಡಿಸಿದ ದಂಡನೆಯನ್ನು ವಿಧಿಸಲು ಸರ್ಕಾರವು ಶಿಸ್ತು ಪ್ರಾಧಿಕಾರವಾಗಿ ಮುಂದುವರಿಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಪಿ.ಮಾರ್ಕಂಡೇಯ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-2)

## GOVERNMENT OF KARNATAKA

No. DPAR 47 SDE 2011

Karnataka Government
Secretariat
Vidhana Soudha
Bangalore, dated: 12.10.2011.

## NOTIFICATION

In exercise of the powers conferred by the proviso to sub-rule (1) of rule 7 of the Karnataka Civil Services (Classification, Control and Appeal) Rules, 1957, the Government of Karnataka, hereby specifies that the Chief Secretary to Government shall be Appointing Authority in respect of first appointments to Group-B posts of Section Officers of the Karnataka Government Secretariat.

By Order and in the name of the
Governor of Karnataka,

(H.K..Lakshminarayana Rao)
Under Secretary to Government I/c,
Department of Personnel and
Administrative Reforms
(Service Rules-2)

**GOVERNMENT OF KARNATAKA**

No. DPAR 11 SDE 2015

Karnataka Government Secretariat
Vidhana Soudha
Bangalore, dated: 23.05.2015.

**NOTIFICATION**

In exercise of the powers conferred by the proviso to sub rule (1) of rule 7 of the Karnataka Civil Services (Classification, Control and Appeal) Rules, 1957, the Government of Karnataka, hereby specifies that the Chief Secretary to Government shall be Appointing Authority in respect of first appointments to Group-B Posts of the Karnataka Government Secretariat Service.

By Order and in the name of the
Governor of Karnataka

(Dr.Mangala G.S)
Under Secretary to Government
Department of Personnel and
Administrative Reforms
(Service Rules-1)

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

| ಸಂಪುಟ –೧೫೬<br>**Volume - 156** | ಬೆಂಗಳೂರು, ಗುರುವಾರ, ೦೧, ಜುಲೈ, ೨೦೨೧ (ಆಷಾಢ, ೧೦, ಶಕವರ್ಷ, ೧೯೪೩)<br>**BENGALURU, THURSDAY, 01, JULY, 2021 ( ASHADHA , 10, SHAKAVARSHA, 1943)** | ಸಂಚಿಕೆ ೯೧<br>**Issue 91** |
|---|---|---|


## ಭಾಗ ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 19 ಸೇಇವಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 28.06.2021

**ಅಧಿಕೃತ ಜ್ಞಾಪನ**

**ವಿಷಯ** ರಾಜ್ಯ ಸರ್ಕಾರವು ಸ್ಥಾಪಿಸಿರುವ ನಿಗಮ, ಮಂಡಳಿ, ಕಂಪನಿ, ಸ್ಥಳೀಯ ಸಂಸ್ಥೆ, ವಿಶ್ವವಿದ್ಯಾಲಯ ಇತ್ಯಾದಿ ಸ್ವಾಯತ್ತ ಸಂಸ್ಥೆಗಳು ಅವುಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನಿಯಮ/ವಿನಿಯಮಗಳನ್ನು ರಚಿಸುವ ಬಗ್ಗೆ ಸೂಚನೆಗಳು.

****

ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇಮಕಾತಿ ಮತ್ತು ನೇಮಕಾತಿ ಹೊಂದುವ ವ್ಯಕ್ತಿಗಳ, ಅಂದರೆ, ಸರ್ಕಾರಿ ನೌಕರರ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ದಿನಾಂಕ 02.04.1992ರ ಪೂರ್ವದಲ್ಲಿ ಸಂವಿಧಾನದ ಅನುಚ್ಛೇದ 309ರ ಪರಂತುಕದಡಿ ಪ್ರದತ್ತ ಮಾಡಿರುವ ಅಧಿಕಾರವನ್ನು ಪ್ರಯೋಗಿಸಿ ರಚಿಸಲಾಗುತ್ತಿತ್ತು. ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (The Karnataka Civil Service Act 1978) ದಿನಾಂಕ 02.04.1992 ರಿಂದ ಜಾರಿಗೆ ಬಂದಿರುವುದರಿಂದ, ಈ ಅಧಿನಿಯಮದಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸಿ ಸೇವಾ ನಿಯಮಗಳನ್ನು ರಚಿಸಲಾಗುತ್ತಿದೆ. ಈ ಅಧಿನಿಯಮದಡಿ ರಚಿಸಲಾದ ನಿಯಮಗಳು ರಾಜ್ಯ ಸರ್ಕಾರವು ಸ್ಥಾಪಿಸಿರುವ ನಿಗಮ, ಮಂಡಳಿ, ಕಂಪನಿ, ಸ್ಥಳೀಯ ಸಂಸ್ಥೆ, ವಿಶ್ವವಿದ್ಯಾಲಯ ಇತ್ಯಾದಿ

ಸ್ವಾಯತ್ತ ಸಂಸ್ಥೆಗಳಿಗೆ ನೇರವಾಗಿ ಅನ್ವಯವಾಗುವುದಿಲ್ಲ. ಮೇಲೆ ಉಲ್ಲೇಖಿಸಿರುವ ಸಂಸ್ಥೆಗಳು ಅವುಗಳ ಸೃಜನೆಗೆ ಆಧಾರವಾದ ಅಧಿನಿಯಮ, ನಿಯಮ ಇತ್ಯಾದಿಯಡಿ ರಾಜ್ಯ ಸರ್ಕಾರದ ಕಾರ್ಯನೀತಿಗೆ ಅನುಗುಣವಾಗಿ ತಮ್ಮದೇ ಆದ ಸೇವಾ ನಿಯಮ / ವಿನಿಯಮಗಳನ್ನು ರಚಿಸಬೇಕಾಗುತ್ತದೆ.

2. ಆದರೆ, ಮೇಲೆ ಉಲ್ಲೇಖಿಸಿರುವ ಸಂಸ್ಥೆಗಳು ತಮ್ಮದೇ ಆದ ಸೇವಾ ನಿಯಮ / ವಿನಿಯಮಗಳನ್ನು ರಚಿಸದೇ, ರಾಜ್ಯ ಸರ್ಕಾರ ರಚಿಸಿರುವ ಸೇವಾ ನಿಯಮಗಳನ್ನು "ಯಥೋಚಿತ ಬದಲಾವಣೆಗಳೊಂದಿಗೆ (mutatis-mutandis)" ಅಳವಡಿಸಿಕೊಳ್ಳಲು ಆಸ್ಪದಗಳನ್ನು ಕಲ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. **[**ಉದಾಹರಣೆಗೆ, ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957, ಸಾಮಾನ್ಯ ನೇಮಕಾತಿ ನಿಯಮಗಳು, ನಡತೆ ನಿಯಮಗಳು, ಇತ್ಯಾದಿ**].** ಆದರೆ, ಮೇಲೆ ತಿಳಿಸಿದಂತೆ ರಾಜ್ಯ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ರಚಿಸಿರುವ ಸೇವಾ ನಿಯಮಗಳು ಮೇಲೆ ಉಲ್ಲೇಖಿಸಿರುವ ಸಂಸ್ಥೆಗಳ ನೌಕರರಿಗೆ ನೇರವಾಗಿ ಅನ್ವಯವಾಗುವುದಿಲ್ಲ. ರಾಜ್ಯ ಸರ್ಕಾರವು ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ರಚಿಸಿರುವ ಸೇವಾ ನಿಯಮಗಳನ್ನು ಅಳವಡಿಸಿಕೊಂಡ ಕಾರಣಕ್ಕೆ ಮೇಲೆ ಉಲ್ಲೇಖಿಸಿರುವ ಸಂಸ್ಥೆಗಳ ನೌಕರರುಗಳನ್ನು ಸರ್ಕಾರಿ ನೌಕರರೆಂದು ಅರ್ಥೈಸಿಕೊಳ್ಳಲು ಬರುವುದಿಲ್ಲ, ಹಾಗೂ ಅಂತಹ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದಂತೆ ಅವುಗಳು ತಮ್ಮದೇ ಆದ ಪ್ರತ್ಯೇಕ ಸೇವಾ ನಿಯಮಗಳನ್ನು ರಚಿಸಿಕೊಳ್ಳಬೇಕಾಗುತ್ತದೆ.

3. ಮೇಲೆ ಉಲ್ಲೇಖಿಸಿರುವ ಹಲವಾರು ಸಂಸ್ಥೆಗಳು, ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ನ್ನು "ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗುತ್ತವೆ" ಎಂದು ತಮ್ಮ ಸೇವಾ ನಿಯಮಗಳಲ್ಲಿ ಅಳವಡಿಸಿಕೊಂಡಿರುತ್ತವೆ. ಆದರೆ, 1957ರ ಸದರಿ ನಿಯಮಗಳು ಸರ್ಕಾರಿ ನೌಕರರಿಗೆ ಮಾತ್ರ ಅನ್ವಯವಾಗುತ್ತವೆಂದು ಈ ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಅಲ್ಲದೆ, 1957ರ ಸದರಿ ನಿಯಮಗಳಲ್ಲಿ ನೇಮಕಾತಿ ಪ್ರಾಧಿಕಾರ, ಶಿಸ್ತು ಪ್ರಾಧಿಕಾರ, ಮೇಲ್ಮನವಿ ಪ್ರಾಧಿಕಾರ, ಅಮಾನತ್ತಿನಲ್ಲಿಡಲು ಸಕ್ಷಮವಾದ ಪ್ರಾಧಿಕಾರಗಳನ್ನು ಇಲಾಖಾವಾರು ನಿರ್ದಿಷ್ಟವಾಗಿ ಗೊತ್ತುಪಡಿಸಲಾಗಿದ್ದು, ಈ ಪ್ರಾಧಿಕಾರಗಳನ್ನು ಮೇಲ್ಕಂಡ ಸಂಸ್ಥೆಗಳು ಯಥಾವತ್ತಾಗಿ ಅಳವಡಿಸಿಕೊಳ್ಳಲು ಬರುವುದಿಲ್ಲ. ಇದಲ್ಲದೇ ಈ ನಿಯಮಗಳ ನಿಯಮ 14(ಎ)ರಲ್ಲಿ ಸರ್ಕಾರಿ ನೌಕರರಿಗೆ ಸಂಬಂಧಪಟ್ಟ ಪ್ರಕರಣಗಳನ್ನು ಇಲಾಖಾ ವಿಚಾರಣೆಗಾಗಿ ಲೋಕಾಯುಕ್ತ ಸಂಸ್ಥೆಗೆ ಸರ್ಕಾರದಿಂದ ವಹಿಸಲು ಉಪಬಂಧಗಳನ್ನು ಕಲ್ಪಿಸಲಾಗಿದೆ. ಇಂತಹ ನಿರ್ದಿಷ್ಟ ಉಪಬಂಧಗಳನ್ನು ಯಥೋಚಿತ ವ್ಯತ್ಯಾಸಗಳೊಂದಿಗೆ ಸಂಬಂಧಪಟ್ಟ ಸಂಸ್ಥೆಗಳು ತಮ್ಮದೇ

ಆದ ನಿಯಮಗಳನ್ನು ರಚಿಸಿ ಅಳವಡಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದಲ್ಲಿ ಅನಾವಶ್ಯಕ ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ತೊಡಕುಗಳು ಉಂಟಾಗುತ್ತವೆ. ಇವು ವ್ಯಾಜ್ಯಗಳಿಗೆ ಕೂಡ ಎಡೆಮಾಡಿಕೊಡುತ್ತವೆ.

4. ಆದಕಾರಣ, ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಸರ್ಕಾರ ರಚಿಸಿರುವ ಸೇವಾ ನಿಯಮಗಳನ್ನು "ಯಥೋಚಿತ ಬದಲಾವಣೆಗಳೊಂದಿಗೆ (mutatis-mutandis)" ಅಳವಡಿಸಿಕೊಳ್ಳಲು ಆಸ್ಪದಗಳನ್ನು ಕಲ್ಪಿಸುವ ವಾಡಿಕೆಯನ್ನು ಇಂತಹ ಸಂಸ್ಥೆಗಳು ಕೈಬಿಡಬೇಕೆಂದು ಹಾಗೂ ಅವುಗಳ ನೌಕರರಿಗೆ ಸಂಬಂಧಿಸಿದಂತೆ ತಮ್ಮದೇ ಆದ ಪ್ರತ್ಯೇಕ ಹಾಗೂ ಸ್ವಯಂ-ಅಡಕಗೊಂಡ (self-contained) ಸೇವಾ ನಿಯಮಗಳನ್ನು ರಾಜ್ಯ ಸರ್ಕಾರದ ಕಾರ್ಯನೀತಿಗೆ ಅನುಗುಣವಾಗಿ ರಚಿಸಿಕೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ.

5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಯವರು ಅವರವರ ಆಡಳಿತ ವ್ಯಾಪ್ತಿಯಲ್ಲಿ ಬರುವ, ಮೇಲೆ ಉಲ್ಲೇಖಿಸಿರುವ ಸಂಸ್ಥೆಗಳು ಅಂದರೆ, ನಿಗಮ, ಮಂಡಳಿ, ಕಂಪನಿ, ಸ್ಥಳೀಯ ಸಂಸ್ಥೆ, ವಿಶ್ವವಿದ್ಯಾಲಯ ಇತ್ಯಾದಿ ಸ್ವಾಯತ್ತ ಸಂಸ್ಥೆಗಳಿಗೆ ಮೇಲ್ಕಾಣಿಸಿದ ಸೂಚನೆಗಳನ್ನು ತಿಳಿಸುವಂತೆ ಕೋರಿದೆ.

(ಚಂದ್ರಹಾಸ ಗಂ. ತಾಳೂಕರ)
ಸರ್ಕಾರದ ಉಪಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವಾ ನಿಯಮಗಳು)

**PR-216**

## PROCEEDINGS OF THE GOVERNMENT OF KARNATAKA

Sub: Constitution of the District Committee at District Level to oversee and supervise the maintenance and development of lakes/tanks in the District (except the areas covered by the limits of Municipal Corporations and Municipalities) - reg.

* * *

**Read:** Orders of the Hon'ble High Court of Karnataka on 15.06.2021 in Writ petition No.817/2008 (GM-RES-PIL).

**Preamble:**

The Hon'ble High Court of Karntaka with reference to the subject above in Writ Petition Order as read above, the Hon'ble Court ordered to incorporate additional paragraph '9-A' after paragraph nine in the operative part of the Judgement and order dated 11th April, 2012 in W.P.No.817/2008 as follows -